**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೊಪ್ಪಳ**
**ಸಿ.ಸಿ. ಸಂಖ್ಯೆಃ 225/2020**

**ದಿನಾಂಕಃ 02-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

| | |
|---|---|
| ಸಿಡಬ್ಲ್ಯೂ - | -- |
| ಪಿಡಬ್ಲ್ಯೂ - | 09 |

| | |
|---|---|
| ಹೆಸರು | ಜಂಬುನಾಥ್ |
| ತಂದೆ | ಭೂತಪ್ಪ ಮಜ್ಜಿಗಿ |
| ವಯಸ್ಸು | 50 ವರ್ಷ |
| ಕೆಲಸ | ತಹಸಿಲ್ದಾರ್ |
| ವಾಸಸ್ಥಳ | ಹುಬ್ಬಳ್ಳಿ |

**ಮುಖ್ಯ ವಿಚಾರಣೆ ಃ ಹಿರಿಯ ಸಹಾಯಕ ಸರಕಾರಿ ಅಭಿಯೋಜಕರಿಂದಃ**

1. ನಾನು ದಿನಾಂಕಃ05-09-2018 ರಿಂದ ದಿಃ04-02-2021 ರವರೆಗೆ ನಾನು ತಹಸಿಲ್ದಾರ್ ಕೊಪ್ಪಳ ಅಂತಾ ಕಾರ್ಯನಿರ್ವಹಿಸಿದ್ದೇನೆ.

2. ಕೊಪ್ಪಳದ ಜಮೀನು ಸರ್ವೆ ನಂ.271/ಸಿ ಕ್ಷೇತ್ರ 4 ಎಕರೆ ಇದರ ಪಹಣಿ ದುರಸ್ಥಿಗಾಗಿ ದಿನಾಂಕಃ 18-09-2017 ರಂದು ನಮ್ಮ ಕಚೇರಿಯಲ್ಲಿ ಶರಣಪ್ಪ ತಂದೆ ಹನುಮಂತಪ್ಪ ಗಾಳಿ ಇವರು ಅರ್ಜಿ ಕೊಟ್ಟಿದ್ದು ಪೆಂಡಿಂಗ್ ಇತ್ತು. ಸದರಿ ಅರ್ಜಿಯ ಪ್ರಕಾರ ಅವರು ತಮ್ಮದು ಸರ್ವೆ ನಂ.271/1 ಕ್ಷೇತ್ರ 4 ಎಕರೆ ಇತ್ತು ತಿದ್ದುಪಡಿ ಕಾಲಕ್ಕೆ ಅದು ತಪ್ಪಾಗಿದೆ ಅದರ ಕ್ಷೇತ್ರ 2 ಎಕರೆ ಮಾಡಿಕೊಡಬೇಕು ಎಂದು ತಾನು ಗವಿಯಪ್ಪ ಮರಿಯಪ್ಪ ಗಾಳಿಯವರ ಮೊಮ್ಮಗ ಇದ್ದೇನೆ ಎಂದು ಅರ್ಜಿ ಕೊಟ್ಟಿದ್ದ. ಆ ಕುರಿತು ನಾನು ದಾಖಲೆ ಪರಿಶೀಲನೆ ಮಾಡಿದೆ.

3. ಆಕಾರ್ ಬಂದ್ ಮತ್ತು ಪಹಣಿ ಪ್ರಕಾರ 2000-2001 ರಿಂದ 2021 ರವರೆಗೆ ಸರ್ವೆ ನಂ.271/ಸಿ ಹೊಸ ನಂ.271/1 ಕ್ಷೇತ್ರ 5 ಎಕರೆ ಪಿಕೆ 3 ಗುಂಟೆ ಇತ್ತು. ಇವರು ಹೆಚ್ಚುವರಿಯಾಗಿ 2 ಎಕರೆ ಪಹಣಿಯಲ್ಲಿ ದಾಖಲಿಸಲು ಕೇಳಿರುತ್ತಾರೆ, ಆದರೆ ಅಲ್ಲಿ ಹೆಚ್ಚುವರಿಯಾಗಿ 2 ಎಕರೆ ಕ್ಷೇತ್ರ ಇರುವುದಿಲ್ಲಾ ಎಂದು ಹೇಳಿ ದಿನಾಂಕಃ14-01-2019 ರಂದು ಅರ್ಜಿದಾರರಿಗೆ ಹಿಂಬರಹ ಕೊಟ್ಟಿದ್ದೇನೆ.

4. ನಂತರ ದಿನಾಂಕಃ 13-01-2020 ರಂದು ಶರಣಪ್ಪ ಇವರ ಪರವಾಗಿ ಅವರ ವಕೀಲರಾದ ಎಸ್.ಎ.ಶಮ್ಸ್ ವಕೀಲರು ನಮಗೆ ಒಂದು ನೋಟೀಸ್ ಕೊಟ್ಟರು. ಅದರಲ್ಲಿ ತಮ್ಮ ಕಕ್ಷಿದಾರರಾದ ಶರಣಪ್ಪ ಗಾಳಿ ಅವರ ಹೆಸರನ್ನು 2 ಎಕರೆ ಜಮೀನಿಗೆ ದಾಖಲಿಸಬೇಕು ಎಂದು ಕೇಳಿದರು. ಈಗಾಗಲೇ ಅರ್ಜಿದಾರರಿಗೆ ಹಿಂಬರಹ ಕೊಟ್ಟಿದ್ದೇವೆ. ಅಲ್ಲಿ ಹೆಚ್ಚುವರಿ ಕ್ಷೇತ್ರ ಇಲ್ಲ ಎಂದು ದಿನಾಂಕಃ31-01-2020 ಅವರಿಗೆ ಉತ್ತರ ಕೊಟ್ಟೆ.

5. ಸರ್ವೆ ನಂ.271/1 ಕ್ಷೇತ್ರ 5 ಎಕರೆ ಪಿಕೆ 3 ಗುಂಟೆ, ಅದರಲ್ಲಿ ಮೂಲ ಮಾಲೀಕ ನರಸಪ್ಪ ತಂದೆ ವೆಂಕಪ್ಪ ಅಂತಾ 1973-1974 ರಿಂದ ಪ್ರಾರಂಭವಾಗುವ ಆರ್.ಟಿ.ಸಿಯಲ್ಲಿ ಇರುತ್ತದೆ. ಇಲ್ಲಿಯವರೆಗೂ ಅದೇ ಮುಂದುವರೆದಿರುತ್ತದೆ. ದೃಢಿಕೃತ ಪತ್ರವನ್ನು ಆರ್.ಟಿ.ಸಿ ಪ್ರತಿಯನ್ನು ನಮ್ಮ ಕಚೇರಿಯಿಂದ ಪಡೆದುಕೊಂಡು ಅದನ್ನು ತಿದ್ದಿ ನರಸಪ್ಪ ತಂದೆ ವೆಂಕಪ್ಪ ಇದ್ದ ಪಹಣಿ ಪತ್ರಿಕೆಯಲ್ಲಿ ವೆಂಕಪ್ಪ ಎಂಬ ಪದದ ಮುಂದೆ ಗಾಳಿ ಎಂಬ ಪದವನ್ನು ಸೇರಿಸಿ ನೋಟೀಸಿನೊಂದಿಗೆ ಕೊಟ್ಟಿರುತ್ತೀರಿ ಎಂದು ತಿಳಿಸಿದೆ. ಗಾಳಿ ಎಂಬ ಶಬ್ದವನ್ನು ಖೊಟ್ಟಿಯಾಗಿ ನೀವೆ ಸೇರಿಸಿ ಈ ರೀತಿ ನೋಟೀಸ್ ಕೊಟ್ಟಿದ್ದೀರಿ ಎಂದು ನನ್ನ ಉತ್ತರದಲ್ಲಿ ಹೇಳಿದ್ದೇನೆ.

6. ಈಗ ನ್ಯಾಯಾಲಯ ಮುಂದೆ ಹಾಜರಿರುವ ಆರೋಪಿ ಪರ ವಕೀಲರಾದ ಶ್ರೀ ಎಸ್.ಎ.ಎಸ್ ವಕೀಲರು ನಮ್ಮ ಕಚೇರಿಗೆ ಬಂದಿದ್ದರು, ಅವರು ಸ್ವತಃ ನಮ್ಮ ಕಚೇರಿಯಲ್ಲಿ ಇರುವ ಒರಿಜಿನಲ್ ಆರ್.ಟಿ.ಸಿ ಪರಿಶೀಲನೆ ಮಾಡಿದರು. ತಾವು ಕೊಟ್ಟ ನೋಟೀಸ್ ಸರಿ ಇರುವುದಿಲ್ಲ ಮತ್ತು ನೋಟೀಸಿನೊಂದಿಗೆ ಗಾಳಿ ಎಂದು ಸೇರಿಸಿ ಬರೆದುಕೊಟ್ಟ ಆರ್.ಟಿ.ಸಿ ಪ್ರತಿ ಸಹ ಸರಿ ಇರುವುದಿಲ್ಲ ಅಂತಾ ಅವರೇ ಒಪ್ಪಿಕೊಂಡರು. ನಾನು ಕೊಟ್ಟ ನೋಟೀಸ್ ಮತ್ತು ತಾವು ಮೊದಲು ಕೊಟ್ಟಿದ್ದ ಆರ್.ಟಿ.ಸಿ ಪ್ರತಿ ಗೊಂದಲಕಾರಕ ಇವೆ, ಆ ವಿಷಯ ನನ್ನ ಗಮನಕ್ಕೆ ಬಂದಿರಲಿಲ್ಲ ಎಂದು ಹೇಳಿ ನನಗೆ ಲಿಖಿತವಾಗಿ ಬರೆದುಕೊಟ್ಟರು. ನಾನು ಕೊಟ್ಟ ಎರಡು ನೋಟೀಸುಗಳನ್ನು ನಾನು ಹಿಂಪಡೆದಿರುತ್ತೇನೆ ಎಂದು ನನಗೆ ಪತ್ರ ಕೊಟ್ಟಿರುತ್ತಾರೆ.

7. ವಕೀಲರು ಈ ರೀತಿ ಬರೆದುಕೊಟ್ಟ ನಂತರ ನಮ್ಮ ಕಚೇರಿಯ ಅಭಿಲೇಖಾಲಯ ಶಿರಸ್ತೇದಾರ ಇವರನ್ನು ಕರೆಯಿಸಿ ಶರಣಪ್ಪ ಗಾಳಿ ಇವರು ನಮ್ಮ ಕಚೇರಿಯಿಂದ ಪಹಣಿ ಪತ್ರಿಕೆಯ ದೃಢಿಕೃತ

ನಕಲನ್ನು ನರಸಪ್ಪ ತಂದೆ ವೆಂಕಪ್ಪ ಇದ್ದುದ್ದನ್ನು ಪಡೆದುಕೊಂಡು, ಅದರಲ್ಲಿ ಗಾಳಿ ಎಂಬ ಪದವನ್ನು ತಾವೇ ಬರೆದುಕೊಂಡು ಖೊಟ್ಟೆ ದಾಖಲೆ ಸೃಷ್ಟಿ ಮಾಡಿದ್ದಾರೆ ಎಂದು ಹೇಳಿ ಮೊಕದ್ದಮೆ ದಾಖಲಿಸಬೇಕು ಎಂದು ಲಿಖಿತವಾಗಿ ದಿನಾಂಕಃ 25-02-2020 ರಂದು ಕಚೇರಿ ಆದೇಶ ಮಾಡಿದೆ. ಆ ಪ್ರಕಾರ ಅವರು ಶರಣಪ್ಪ ಹನುಮಂತಪ್ಪ ಗಾಳಿ ಇವರ ಮೇಲೆ ಫಿರ್ಯಾದಿ ಕೊಟ್ಟಿದ್ದಾರೆ. ಮೂಲ ಮಾಲೀಕ ನರಸಪ್ಪ ತಂದೆ ವೆಂಕಪ್ಪ ಇವರ ಅಡ್ಡ ಹೆಸರು ಕರಮುಡಿ ಎಂದು ಹಳೆಯ ಪಹಣಿ ಪತ್ರಿಕೆಯಲ್ಲಿ 1963-1964 ರಿಂದ 1966-1967 ರವರೆಗೆ ಇರುತ್ತದೆ. ಅದು ಮುಂದುವರೆದ ವರ್ಷಗಳಲ್ಲಿ ನಮ್ಮ ಕಚೇರಿಯವರು ನರಸಪ್ಪ ತಂದೆ ವೆಂಕಪ್ಪ ಮಾತ್ರ ಬರೆಯುತ್ತಾ ಬಂದಿರುತ್ತಾರೆ.

8. ಸದರಿ ಶರಣಪ್ಪ ಹನುಮಂತಪ್ಪ ಗಾಳಿ ಇವರು ನರಸಪ್ಪ ತಂದೆ ವೆಂಕಪ್ಪ ಕರಮುಡಿ ಇವರಿಗೆ ಸಂಬಂಧ ಅಂತಾ ತೋರಿಸಿಲ್ಲ. ಇದೇ ಜಮೀನಿನಲ್ಲಿ ಡಿ.ಸಿ.ಆಫೀಸ್ ಕಟ್ಟಿರುತ್ತಾರೆ. ನರಸಪ್ಪ ತಂದೆ ವೆಂಕಪ್ಪ ಕರಮುಡಿ ಇವರ ವಾರಸುದಾರರು ಎಲ್ಲಿ ಇದ್ದಾರೆ ಅಂತಾ ಗೊತ್ತಿಲ್ಲ. ಅವರು ಪರಿಹಾರದ ಹಣ ಸಹ ಪಡೆದಿಲ್ಲ ಎಂದು ಕೇಳಿ ಗೊತ್ತಾಗಿದೆ ಆದರೆ ದಾಖಲೆ ನೋಡಿಲ್ಲ.

9. ಶರಣಪ್ಪ ತಂದೆ ಹನುಮಂತಪ್ಪ ಇವರು ಕೊಟ್ಟಿದ್ದ ಅರ್ಜಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ. ನಾನು ದಿನಾಂಕಃ 14-01-2019 ರಂದು ಕೊಟ್ಟ ಹಿಂಬರಹವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದೆ. ಅದರ ಮೇಲೆ ಇರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ವಕೀಲರು ಕೊಟ್ಟಿದ್ದ ಲೀಗಲ್ ನೋಟೀಸ್ ಪ್ರತಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದೆ. ಅದಕ್ಕೆ ಕೊಟ್ಟ ಉತ್ತರದ ಪ್ರತಿ ಈಗಾಗಲೇ ನಿಪಿ-6 ಎಂದು ಗುರುತಿಸಿದ್ದು, ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಶಮ್ಸ್ ವಕೀಲರು ದಿನಾಂಕಃ 13-02-2020 ರಂದು ಕೊಟ್ಟ ನೋಟೀಸ್ ನಿಪಿ-7 ಎಂದು ಗುರುತಿಸಲಾಗಿದೆ. ಶಮ್ಸ್ ವಕೀಲರು ತಾವು ಕಾನೂನು ರೀತಿಯ ಕೊಟ್ಟ ನೋಟೀಸುಗಳನ್ನು ಮರಳಿ ಪಡೆಯುವ ಬಗ್ಗೆ ದಿನಾಂಕಃ 17-02-2020 ರಂದು ತಮ್ಮ ಸಮಕ್ಷಮ ಬರೆದುಕೊಟ್ಟ ಪತ್ರ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿರುತ್ತದೆ. ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

10. ಸರ್ವೆ ನಂ.226/ಬಿ ಇದರ 1957-1958 ರಿಂದ 1977-1978 ನೇ ಸಾಲಿನ ಪಹಣಿ ಪತ್ರಿಕೆಗಳ ಪ್ರತಿಯನ್ನು ಹಾಜರುಪಡಿಸಿದ್ದು ಅವುಗಳ ಮೇಲೆ ನರಸಪ್ಪ ತಂದೆ ವೆಂಕಪ್ಪ ಎಂದು ಇರುತ್ತದೆ. ಸರ್ವೆ ನಂ.271/1 ಇದರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು 1973-1974 ರಿಂದ 1977-1978 ರವರೆಗೆ ನರಸಪ್ಪ ತಂದೆ ವೆಂಕಪ್ಪ ಅಂತಾ ದಾಖಲು ಇರುತ್ತದೆ. ಸರ್ವೆ ನಂ.271/1 ಇದರ 1973-1974 ರಿಂದ 2000-2001 ನೇ ಸಾಲಿನ ಪಹಣಿ ಪತ್ರಿಕೆ ಹಾಜರುಪಡಿಸಿದ್ದು ಅದು 1973-1974 ರಲ್ಲಿ ನರಸಪ್ಪ ಗಾಳಿ ಅಂತಾ ಇದ್ದು ಅದು 2000-2001 ರವರೆಗೆ ಮುಂದುವರೆದಿರುತ್ತದೆ. ಸದರಿ ಶರಣಪ್ಪ ಹನುಮಂತಪ್ಪ ಗಾಳಿ ಈತನು ನೀವು ಕೊಟ್ಟ ಹಿಂಬರಹವನ್ನು ಮತ್ತು ನೀವು ಕೊಟ್ಟ ವಿವಾದಿತ ಜಮೀನಿನ ಪಹಣಿ ಪತ್ರಿಕೆಯನ್ನು ತೆಗೆದುಕೊಂಡು ಹೋಗಿ ನಾನು ಎಸ್.ಎ.ಶಮ್ಸ್ ವಕೀಲರನ್ನು ಭೇಟಿಯಾಗಿದ್ದೆ, ಅವರು ತಾವು ಕೊಟ್ಟ ಪಹಣಿ ಪತ್ರಿಕೆಯ ನಕಲಿನಲ್ಲಿ ನರಸಪ್ಪ ತಂದೆ ವೆಂಕಪ್ಪ ಎಂದು ಬರೆದಿದ್ದರ ಮುಂದೆ ಗಾಳಿ ಎಂದು ಎಸ್.ಎ.ಶಮ್ಸ್ ವಕೀಲರೆ ಬರೆದಿದ್ದಾರೆ ಎಂದು ಹೇಳಿ ನನಗೆ ಲಿಖಿತವಾಗಿ ಬರೆದುಕೊಟ್ಟಿರುತ್ತಾರೆ ಎಂದು ಹೇಳಿ ಆ ರೀತಿ ಬರೆದುಕೊಟ್ಟಿದ್ದನ್ನು ತನಿಖಾ ಕಾಲಕ್ಕೆ ಪೋಲೀಸ್ ಠಾಣೆಗೆ ಕಳುಹಿಸಿಕೊಟ್ಟಿದ್ದೇನೆ ಎಂದು ಹೇಳುತ್ತಾರೆ ಮತ್ತು ಅದರ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿದ್ದಾರೆ.

**<u>ಪಾಟೀ ಸವಾಲು ಃ ಆರೋಪಿ ಪರ ಶ್ರೀ S.A.S ವಕೀಲರಿಂದಃ</u>**

ಆರೋಪಿ ಪರ ಶ್ರೀ ಎಸ್.ಎ.ಎಸ್ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಪಾಟೀಸವಾಲಿಗೆ ಮುಂದೂಡಲಾಯಿತು.

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಸಿ.ಜೆ.ಎಮ್., ಕೊಪ್ಪಳ.